ಆಯಾಯ ವರ್ಷವೇ ಆ ಜನರಿಗೆ ಯೋಜನೆಯ ಪ್ರಯೋಜನ ಸಿಗಬೇಕು. ಅದಕ್ಕೆ ನೀವೇನಾದರೂ ಸೂಕ್ತ ಕಾರ್ಯಕ್ರಮ ರೂಪಿಸಿ.

ಶ್ರೀ ಹೆಚ್. ಆಂಜನೇಯ:– ಮಾನ್ಯ ಅಧ್ಯಕ್ಷರೆ, ತಮ್ಮ ಸಲಹೆಯಂತೆ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:– ಓ.ಕೆ. ಮುಂದಿನ ಪ್ರಶ್ನೆ ವಸಂತ ಬಂಗೇರರವರದ್ದು ಇದೆ. ಈಗ ಅವರು ಸದನದಲ್ಲಿ ಇಲ್ಲ. ಮುಂದಿನ ಪ್ರಶ್ನೆ ಕೆ.ಆರ್.ರಮೇಶ್ ಕುಮಾರ್‌ರವರದ್ದು.

ಕೋಲಾರ ಪ್ಯಾಕೇಜ್ ಸ್ಕೀಮ್

115 (2083); ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ)

ಅ) ಕೋಲಾರ ಜಿಲ್ಲೆಯಲ್ಲಿ ಪ್ಯಾಕೇಜ್ ಸ್ಕೀಮ್ ಅಡಿಯಲ್ಲಿ ಆರ್.ಟಿ.ಓ. ಇಲಾಖೆಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಆ) ಇದರಲ್ಲಿ ಓವರ್ ಲ್ಯಾಪಿಂಗ್ ಎಂದು (5 ಕಿ.ಮೀ. ಅಂತರದ) ಬಂದಿರುವ ಅರ್ಜಿಗಳಲ್ಲಿ ಎಷ್ಟನ್ನು ತಿರಸ್ಕರಿಸಲಾಗಿದೆ; (ಕಳೆದ 5 ವರ್ಷಗಳ ಮಾಹಿತಿ ಒದಗಿಸುವುದು);

ಇ) ಕೋಲಾರ ಜಿಲ್ಲೆಯೊಂದಿಗೆ ಪರವಾನಿಗೆ ಇಲ್ಲದೆ ಅನಧಿಕೃತವಾಗಿ ಪ್ಯಾಸೆಂಜರ್ ಗಾಡಿಗಳು ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಕಳೆದ 5 ವರ್ಷಗಳ ಅವಧಿಯಲ್ಲಿ ಸ್ವೀಕರಿಸಲಾದ ಅರ್ಜಿಗಳು :

1) ರಾಜ್ಯ ಸಾರಿಗೆ ಪ್ರಾಧಿಕಾರದಿಂದ	– 119 ಅರ್ಜಿಗಳು
2) ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಕೋಲಾರದಿಂದ	– 77 ಅರ್ಜಿಗಳು

1) ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಬೆಂಗಳೂರು ಗ್ರಾಮಾಂತರದಿಂದ	– 102 ಅರ್ಜಿಗಳು
ಒಟ್ಟು	**– 298 ಅರ್ಜಿಗಳು**

ಆ) ಕಳೆದ 5 ವರ್ಷಗಳ ಅವಧಿಯಲ್ಲಿ ಕೋಲಾರ ರಾಷ್ಟ್ರೀಕೃತ ಯೋಜನೆ ಮಾರ್ಗಗಳಲ್ಲಿ ಹಾದು ಹೋಗುವ (ಓವರ್ ಲ್ಯಾಪಿಂಗ್) ಕೆಳಕಂಡ ತಿರಸ್ಕರಿಸಲಾಗಿದೆ.

1) ರಾಜ್ಯ ಸಾರಿಗೆ ಪ್ರಾಧಿಕಾರದಿಂದ ಅರ್ಜಿಗಳು	–34
2) ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಕೋಲಾರದಿಂದ ಅರ್ಜಿಗಳು	–54
ಒಟ್ಟು ತಿರಸ್ಕರಿಸಲಾದ ಅರ್ಜಿಗಳು	**– 88 ಅರ್ಜಿಗಳು**

(ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಇ) ಕೋಲಾರ ಜಿಲ್ಲೆಯೊಳಗೆ ಪರವಾನಿಗೆ ಇಲ್ಲದ ಮಜಲು ವಾಹನಗಳು ಅನಧಿಕೃತವಾಗಿ ಸಂಚರಿಸುತ್ತಿದ್ದ 27 ಪ್ರಕರಣಗಳು ಕಂಡು ಬಂದಿದ್ದು, ಅವುಗಳ ಸಂಚಾರ ನಿಲ್ಲಿಸಲಾಗಿದೆ.

ಈ) ಸಾರಿಗೆ ಇಲಾಖೆಯಿಂದ ಕೋಲಾರ ಜಿಲ್ಲೆಯಲ್ಲಿ ಸಂಚರಿಸುತ್ತಿರುವ ಖಾಸಗಿ ವಾಹನಗಳನ್ನು ತಪಾಸಣೆ ಮಾಡಲು ವಿಶೇಷ ತನಿಖಾ ತಂಡಗಳನ್ನು ರಚನೆ ಮಾಡಲಾಗಿದ್ದು, ಪರವಾನಿಗೆ ನಿಯಮಗಳನ್ನು ಉಲ್ಲಂಘಿಸಿ ನಿಗದಿತ ಮಾರ್ಗಗಳಲ್ಲದೇ ಬೇರೆ ಮಾರ್ಗಗಳಲ್ಲಿ ಸಂಚರಿಸುತ್ತಿರುವ ವಾಹನಗಳನ್ನು ತಪಾಸಣೆಗೆ ಒಳಪಡಿಸಿ ಪ್ರಕರಣ ದಾಖಲಿಸಲಾಗುತ್ತಿದೆ. ದಿನಾಂಕ 01–04–2014 ರಿಂದ ಇಂದಿನವರೆಗೆ ರಹದಾರಿ ನಿಯಮಗಳನ್ನು ಉಲ್ಲಂಘಿಸಿ ಸಂಚರಿಸುತ್ತಿರುವ 423 ವಾಹನಗಳನ್ನು ತನಿಖೆಗೆ ಒಳಪಡಿಸಿ ಪ್ರಕರಣಗಳನ್ನು ದಾಖಲಿಸಲಾಗಿದೆ.

ಇವುಗಳಲ್ಲಿ 135 ಖಾಸಗಿ ಮಜಲು ವಾಹನಗಳನ್ನು ವಶಕ್ಕೆ ತೆಗೆದುಕೊಂಡು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ. 19 ಪ್ರಕರಣಗಳಲ್ಲಿ ರಹದಾರಿಗಳನ್ನು ಅಮಾನತ್ತು ಪಡಿಸಲಾಗಿದೆ ಹಾಗೂ ₹ 8,98,580/–ಗಳನ್ನು ರಾಜಿ ದಂಡ ಮತ್ತು ತೆರಿಗೆ ರೂಪದಲ್ಲಿ ವಸೂಲಿ ಮಾಡಲಾಗಿದೆ. (ತೆರಿಗೆ ₹ 2,21,624/– + ದಂಡ ₹ 6,76,956/–) ಉಳಿದ ಪ್ರಕರಣಗಳಲ್ಲಿ ಪರವಾನಗಿದಾರರಿಗೆ ಮೋಟಾರು ವಾಹನ ಕಾಯ್ದೆ 1988ರ ಸೆಕ್ಷನ್ 86ರ ಪ್ರಕಾರ ರಹದಾರಿಯನ್ನು ರದ್ದುಪಡಿಸಬಾರದೇಕೆ ಎಂಬುದಕ್ಕೆ ಕಾರಣ ಕೇಳಿ ಸೂಚನಾ ಪತ್ರಗಳನ್ನು ನೀಡಲಾಗಿದ್ದು ವಿವರಣೆ ಬಂದ ನಂತರ ಮುಂದಿನ ಕ್ರಮವನ್ನು ಜರುಗಿಸಲಾಗುವುದು.

ಅನುಬಂಧ - 1

ರಾಜ್ಯ ಸಾರಿಗೆ ಪ್ರಾಧಿಕಾರದಿಂದ ಕಳೆದ 5 ವರ್ಷಗಳ ಅವಧಿಯಲ್ಲಿ ಓವರ್ ಲ್ಯಾಪಿಂಗ್ (5 ಕಿಲೋ ಮೀಟರ್ ಅಂತರ) ಕಾರಣಗಳ ಮೇರೆಗೆ ತಿರಸ್ಕರಿಸಲಾದ ಅರ್ಜಿಗಳ ವಿವರ :-

ಕ್ರಮ ಸಂಖ್ಯೆ	ಮಾರ್ಗ	ಅರ್ಜಿಗಳ ಸಂಖ್ಯೆ	ಓವರ್ ಲ್ಯಾಪಿಂಗ್ ಅಂತರ
1	ಸುಗಂಧಹಳ್ಳಿ - ಹುಣಸೇನಹಳ್ಳಿ	1	1.5 ಕಿ.ಮೀ
2	ಹುಣಸೇನಹಳ್ಳಿ - ಸುಗಂಧಹಳ್ಳಿ	1	1.5 ಕಿ.ಮೀ
3	ಬೂದಿಕೋಟೆ ಕ್ರಾಸ್ - ಗುಂಜೂರು	1	0.1 ಕಿ.ಮೀ
4	ಗಾಂಡ್ಲಹಳ್ಳಿ - ಪೇಟೆಚಾಮನಹಳ್ಳಿ	14	0.2 ಕಿ.ಮೀ
5	ಗಾಂಡ್ಲಹಳ್ಳಿ - ಪೇಟೆಚಾಮನಹಳ್ಳಿ	1	0.2 ಕಿ.ಮೀ
6	ಬ್ಯಾತನೂರು - ಕೆ.ಜಿ.ಎಫ್	2	0.2 ಕಿ.ಮೀ
7	ಕೋಲಮೂರು - ಜಿ.ಕೆ.ಪುರಂ	2	2.5 ಕಿ.ಮೀ
8	ಮುಳಬಾಗಲು - ಶ್ರೀನಿವಾಸಪುರ	2	0.5 ಕಿ.ಮೀ
9	ರಾಜಗೊಂಡ್ಲ ಹಳ್ಳಿ - ತಿಮ್ಮರಾಜಪಲ್ಲಿ	1	1 ಕಿ.ಮೀ
10	ಹೆಬ್ಬಣಿ - ಪಂತನಹಳ್ಳಿ	4	0.2 ಕಿ.ಮೀ
11	ಪಂತನಹಳ್ಳಿ - ಲಕ್ಕೂರು	1	0.1 ಕಿ.ಮೀ
12	ಗಾಂಡ್ಲಹಳ್ಳಿ - ಪೇಟೆಚಾಮನಹಳ್ಳಿ	4	0.2 ಕಿ.ಮೀ
	ಒಟ್ಟು ಅರ್ಜಿಗಳು	34	

Details of overlapping-Kolar-Packet Scheme

Sl.No.	Sub. No.	Name of Applicant	Route
1	01/2008-09	Smt. Yashodamma Malur-Tq	Pachaganahalli Cross to Thrunasi
2	02/2008-09	Smt. Shantamma Malur-Tq	Thrunasi To Pachaganahalli Cross
3	03/2008-09	Smt. Shantamma Malur-Tq	V Thopu to Bhavana Halli,
4	22/2005-06	Shree Rahim Sharif Shirinivaspur-Town	Cheelepalli Cross To Forest range office
5	26/2005-06	Smt. G V Mamata Shirinivaspur-Town	Cheelepalli Cross To Forest range office
6	27/2005-06	Shree T V Shivashankar Reddy Shirinivaspur-Town	Cheelepalli Cross To Forest range office
7	18x/1996-97	Shree Saleem Khan Bangalore	Mulbagal To Bangalore
8	18x/1996-97	Shree Saleem Khan Bangalore	Bangalore To Mulbagal
9	18(ii)/1996-97	Shree Abdul Ameed Bangalore	Bangalore To Mulbagal
10	37A/2004	Shree Sayyad Elaz pasha Shrinivaspura	Manighatta Cross (Kolar) To Gownipalli Cross (Rice mill)
11	37B/2004	Shree Sayyad Elaz pasha Shrinivaspura	Manighatta Cross (Kolar) To Gownipalli Cross (Rice mill)
12	10/2011-12	Shree T B Krishna Shetty	Muduvathi To Anikarahalli
13	11/2011-12	Smt. Shantamma Malur-Tq	Muduvathi To Anikarahalli
14	12/2011-12	Smt. Neelamma Bangarapet-Tq	Muduvathi To Anikarahalli
15	13/2011-12	Smt. J Jayashankar Malur - Tq	Muduvathi To Anikarahalli
16	18C/2002-03	Shree. G. Yaktiyar Basha Mulabagal - Tq	Hebbani To Thayaalur
17	01/2010-11	Smt Hajira Taj Bangalore-45	Masthi To Malur
18	02/2011-12	Shree T Venkateshan Bangalore-76	Masthi To Malur
19	05/2010-11	Shree H Venkatesh Kolar	Byrakur To Bangalare
20	06/2010-11	Shree H Venkatesh Kolar	Bangalare To Byrakur

21	07/2010-11	Shree K V Nagaraju Kamasamudram	Ammerahalli To Bathalahalli
22	08/2010-11	Shree N Chandrashekhar Kolar	Ammerahalli To Bathalahalli
23	09/2010-11	Shree N Chandrashekhar Kolar	Ammerahalli To Bathalahalli
24	10/2010-11	Shree V Narayanaswami Bangarapet - Tq	Ammerahalli To Bathalahalli
25	18/2010-11	Shree B Ramachandra Kolar	Ammerahalli To Bathalahalli
26	19/2010-11	Shree B Ramachandra Kolar	Ammerahalli To Bathalahalli
27	14/2010-11	Shree B Ramachandra Kolar	Chadlaura To Rahamathnagar
28	15/2010-11	Shree B Ramachandra Kolar	Chadlaura To Rahamathnagar
29	16/2010-11	Shree N Chandrashekhar Kolar	Chadlaura To Rahamathnagar
30	17/2010-11	Shree N Chandrashekhar Kolar	Chadlaura To Rahamathnagar
31	02/2011-12	Shree K V Nagaraju, Kamasamudram	Rahamathnagar To Chadlapura
32	03/2011-12	Shree Afsar Bangalore	Beriki Cross To Koraluru
33	04/2011-12	Smt. Farida Bangalore	Beriki Cross To Koraluru
34	05/2011-12	Shree. Zaheeruddin Bangalore	Beriki Cross To Koraluru
35	06/2011-12	Shree Mateen Bangalore	Koralur To Beriki Cross
36	07/2011-12	Shree Noushad Bangalore	Koralur To Beriki Cross
37	08/2011-12	Shree Liyakath Bangalore	Koralur To Beriki Cross
38	09/2011-12	Smt. Waheeda Bangalore	Koralur To Beriki Cross
39	17/2004-05	Shree B R Balasubramanyam KGF	Bangarpet To Kamasamudram
40	35/2007-08	Shree K R Suresh Babu KGF	Hurkundam To Bangarpet, Bangarpet To Kamaodahalli, Bangarpet To Harati
41	11/2010-11	Shree Mohammed Nasurulla Kolar	KEB Office, Chintamani To Millath Circle(Kolar)

42	14/2011-12	Shree S Chand Pasha Mulbagal	KEB Office, Chintamani To Millath Circle(Kolar)
43	15/2011-12	Shree Sarada Pasha Mulbagal Town	KEB Office, Chintamani To Millath Circle(Kolar)
44	14A/2001-02	Shree Sarada Pasha Mulbagal Town	Gummakallu To Kamasamudram
45	14B/2001-02	Shree N Devaraj Mulbagal	Gummakallu To Kamasamudram
46	20A/2002-03	Shree G Narayan Mulbagal	Gummakallu To Kamasamudram
47	20B/2002-03	Shree M G Suresh Mulbagal	Gummakallu To Kamasamudram
48	16/2011-12	Shree A Ahamed Bangalore	Masthi To Malur
49	17/2011-12	Smt Sayeeda Unnisa Bangalore	Masthi To Malur
50	18/2011-12	Shree Narayanswamy Shrinivasapura	Antharagange, Kolar To Mudimadagu
51	01/2013-14	Shree Yaktiyar Basha Mulbagal	Tippadoddi To Mulbagal, Mulbagal To Bissanahally, Mulbagal To Hebbani, Mulbagal To Koladevi, Mulbagal To Nagavara
52	37A/2004	Shree Syed Ejaz pasha Shrinivasapura	Cheelepalli Cross To Forest Range Office
53	37B/2004	Shree Syed Ejaz pasha Shrinivasapura	Cheelepalli Cross To Forest Range Office
54	23/2005-06	Shree Mohiddin Shariff Shrinivasapura Town	Cheelepalli Cross To Forest Range Office

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ಈಗ ನನ್ನ ಪ್ರಶ್ನೆಯೇ ಮಾನ್ಯ ಸಚಿವರಿಗೆ ಸರಿಯಾಗಿ ಮನವರಿಕೆಯಾದಂತೆ ಕಾಣುವುದಿಲ್ಲ. ಇಡೀ ರಾಜ್ಯದಲ್ಲಿ ಕೋಲಾರ ಒಂದು ಕಡೆಯಲ್ಲಿಯೇ ಈ pocket scheme ಎಂದು ಆಗಿದ್ದು. ಪ್ರಶ್ನೆಯಲ್ಲಿ pocket scheme ಎಂದು ಆಗಿದ್ದು. ಪ್ರಶ್ನೆಯಲ್ಲಿ package scheme ಎಂದು ಮಾಡಿದ್ದಾರೆ. ನಮ್ಮ ಕಷ್ಟವೇನಾಗಿದೆಯೆಂದರೆ ಕೆಎಸ್‌ಆರ್‌ಟಿಸಿ ಯವರು ಬಸ್ ಕೊಡುವುದಿಲ್ಲ, ಪ್ರೈವೆಟ್‌ನವರು operate ಮಾಡುವುದಕ್ಕೆ ಇವರು object ಮಾಡುತ್ತಾರೆ. ಕೆಲವು ಜನ protected inter-state stage carriage permit holders ಯಾರಿದ್ದಾರೆ ಅವರ ಹಿತ ಕಾಪಾಡುವುದಕ್ಕೆ illicit permits., ಕೊಟ್ಟು ಟೆಂಪೋಗಳಲ್ಲಿ ಓಡಾಡುವುದು, ಪೊಲೀಸ್‌ನವರಿಗೆ ದುಡ್ಡು ಕೊಟ್ಟು ಓಡಾಡುವುದು, accidents ಆಗೋದು, ಹೀಗೆ ಇದೆಲ್ಲಾ ಆಗುತ್ತಿದೆ. It is a very serious issue. ನಿಮ್ಮ ಹತ್ತಿರ ನಾನು ಚರ್ಚೆಯನ್ನು ಕೂಡ ಮಾಡಿದ್ದೇನೆ. ನಾವು ನಿಮ್ಮನ್ನು ಕೇಳುತ್ತಿರುವುದಿಷ್ಟೆ, nationalized routes ನಲ್ಲಿ city ಯಲ್ಲಿ villages ನಲ್ಲಿ, head quarters ನಲ್ಲಿ ಹೋಗಬೇಕಾದರೆ 5 ರಿಂದ 6 ಕಿ.ಮೀವರೆಗೂ exemption ಕೊಡಿ. ಮಂಡ್ಯಕ್ಕಿಲ್ಲ nationalization, ತುಮಕೂರಿಗಿಲ್ಲ, ಶಿವಮೊಗ್ಗಕ್ಕಿಲ್ಲ, ಹಾಸನಕ್ಕಿಲ್ಲ, ಕೋಲಾರಕ್ಕೆ ಮಾತ್ರ ಬೇಕೇ? ಅವತ್ತ್ಯಾರೋ ಬುದ್ಧಿ ಇದ್ದೋ, ಇಲ್ಲದೆಯೋ ಮಾಡಿದ್ದಾರೆ. ಜನರ ಸೌಕರ್ಯ ಏನು ಬೇಕು ಎಂಬುದನ್ನು ನೋಡಿ. ಇವತ್ತು roads improve ಆಗಿದ್ದಾವೆ. ಪ್ರತಿ ಊರಿಗೆ ಹಳ್ಳಿಗೂ ರಸ್ತೆ ಇದೆ and all the information that you have given is statistically wrong. If I take it to logical end, I will have to move for the privilege. you are a very fine gentleman. ನಿಮ್ಮ ಮೇಲೆ ನಮಗೆ ವಿಶ್ವಾಸವಿದೆ. ನಾನು ನೇರವಾಗಿ ಒಂದೇ ಪ್ರಶ್ನೆ ಕೇಳುತ್ತಿದ್ದೇನೆ. Nationalized routes ನಲ್ಲಿ RTS permit ಕೊಡುವುದಕ್ಕೆ 6 ರಿಂದ 8 ಕಿ.ಮೀ. ವರೆಗೆ ನೀವು exemption ಕೊಡಬೇಕು. ನಿಮಗೆ ಕೊಡುವುದಕ್ಕೆ ಸಾಧ್ಯವೇ ಎಂಬ ಬಗ್ಗೆ ಹೇಳಿ.

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು ಹಿಂದಿನ ವಿಧಾನಸಭೆ ಅಧಿವೇಶನದಲ್ಲಿಯೂ ಕೂಡ

ಪ್ರಶ್ನೆ ಕೇಳಿದ್ದರು. 2002 ರವರೆಗೂ ಕೂಡ overlapping ಗೆ permission ಇತ್ತು. 2003 ರಲ್ಲಿ ಹೈಕೋರ್ಟ್ overlapping ಬೇಡವೆಂದು ಆದೇಶವನ್ನು ಕೊಟ್ಟಿತು. ಆದರೆ 2003 ಕ್ಕಿಂತ ಮುಂಚೆ ಯಾರು ಯಾರಿಗೆ overlapping ಗೆ permission ಕೊಡಲಾಗಿದೆಯೋ ಅವರು overlapping ಮಾಡುವುದು ನಡೆಯುತ್ತಿತ್ತು. ಮತ್ತೆ ಸುಪ್ರೀಂಕೋರ್ಟ್‌ನಲ್ಲಿಯೂ ಕೂಡ ಒಂದು ಕೇಸ್ ಇದೆ. ನಾನು ಮತ್ತು ಜಂಟಿ ಆಯುಕ್ತರು, ರಮೇಶ್‌ಕುಮಾರ್‌ರವರು, ನಾವೆಲ್ಲರೂ ಹಿಂದೆ ಒಂದು ಸಾರಿ ಕುಳಿತು ಮಾತನಾಡಿದ್ದೆವು. ಅವರು ಕೆಎಸ್‌ಆರ್‌ಟಿಸಿ ಯವರು ಬಸ್‌ಗಳನ್ನು ಕೊಡುವುದಿಲ್ಲವೆಂದು ಹೇಳಿದ್ದಾರೆ. ರಮೇಶ್‌ಕುಮಾರ್‌ರವರ ಕ್ಷೇತ್ರಕ್ಕೆ, ಅವರೊಬ್ಬರದ್ದೇ ಕ್ಷೇತ್ರವೆಂದಲ್ಲ, ಎಲ್ಲಾ ಕಡೆಗೂ ಕೂಡ ಬಸ್ ಕೊಡುತ್ತೇವೆ. ಆದರೂ ಕೂಡ ಅವರ ಜೊತೆ final ಆಗಿ ನಮ್ಮ ಹಿರಿಯ ಅಧಿಕಾರಿಗಳ ಜೊತೆ ಕುಳಿತು ಚರ್ಚೆ ಮಾಡಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಸಚಿವರೆ ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಯಾರು ಹೋಗಿರುವವರು ಕೋರ್ಟಿಗೆ? Who are the parties? KSRTC ಯವರು. ಸಾರ್ವಜನಿಕರು ಹೋಗಿದ್ದಾರೆಯೇ? ಕೆಎಸ್‌ಆರ್‌ಟಿಸಿಯವರು indirect ಆಗಿ inter-state stage carriage permit holders ಯಾರಿದ್ದಾರೋ ಅವರ ಪರವಾಗಿ ಗೋಮುಖವ್ಯಾಘ್ರಗಳಾಗಿ ಕೋರ್ಟಿಗೆ ಹೋಗಿ ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದಾರೆ. They are playing a deceptive role. It is a Public Sector Organization. I am a strong advocate of the public sector, ನಾನು ಕೆಎಸ್‌ಆರ್‌ಟಿಸಿಯ ಪರವಾಗಿತಕ್ಕಂಥವನು, ತಾವು ಬಸ್ ಕೊಡುವುದಿಲ್ಲ fleet ಇಲ್ಲ ಎಂದು ಕೇಳುತ್ತಾರೆ, interior villages ಗೆಲ್ಲಾ ಈಗ ರಸ್ತೆಯಾಗಿದೆ, ಎಲ್ಲಾ ಕಡೆಗಳಲ್ಲಿಯೂ ಈಗ ಹೈಸ್ಕೂಲ್ ಮಾಡಿದ್ದೇವೆ, ಬೆಳಿಗ್ಗೆ ಎದ್ದು ಮಕ್ಕಳು ಶಾಲೆಗೆ ಹೋಗಬೇಕು. Please give a specific answer. ನೀವು exemption ಕೊಡುವುದಕ್ಕೆ ಆಗುತ್ತದೆಯೇ? ಕೆಎಸ್‌ಆರ್‌ಟಿಸಿಯವರು ನಿಮ್ಮ ಅಧೀನದಲ್ಲಿ ಇದ್ದಾರೆ, ask them to withdrawn the petition. Why can't they withdraw

the petition? It is a very simple thing. ಇವರು ಸುಮ್ಮನೆ ನಮ್ಮನ್ನು ಕಂಬ ಸುತ್ತಿಸುವ ಕೆಲಸ ಮಾಡುವುದು ಬೇಡ. They can do it with others and not with Ramesh Kumar. You have to take a decision.

ಅಧ್ಯಕ್ಷರು:– ರಮೇಶ್‌ಕುಮಾರ್ ಒಂದು ನಿಮಿಷ ಇರಿ. ಮಾನ್ಯ ಸಚಿವರೆ, ಮಾನ್ಯ ಸದಸ್ಯರ argument ಸರಿಯಿದೆ. ಈಗ ಇವೆಲ್ಲವೂ policy matter. ಆ policy matter ನಿಮ್ಮ ಹೃದಯದಿಂದ ಹೊಕ್ಕಿ ಬರಬೇಕು. ಅದನ್ನು ಅಧಿಕಾರಿಗಳಿಗೆ ಕಾರ್ಯರೂಪಕ್ಕೆ ತೆಗೆದುಕೊಂಡು ಬನ್ನಿ ಎಂದು ನೀವು ಹೇಳಬೇಕು. ಅವರಿಂದ ಕೇಳಿ ನೀವು ಒಳಗೆ ತುಂಬಿಸಿಕೊಂಡರೆ ಈ ಕೆಲಸ ಆಗುವುದಿಲ್ಲ. ಆದುದರಿಂದ ಈಗಾಗಲೇ ಮಾನ್ಯ ರಮೇಶ್‌ಕುಮಾರ್‌ರವರು ಒಂದು ಮಾತನ್ನು ಹೇಳಿದ್ದಾರೆ. ಮಾನ್ಯ ಸಚಿವರೆ ನೀವು ಒಮ್ಮೆ ಅವರ ಜೊತೆ ಇನ್ನೊಂದು ಬಾರಿ ಕುಳಿತು ಚರ್ಚೆ ಮಾಡಿ. you must have a commitment. That's all required. ಆವಾಗ we can impose policy.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ತಮ್ಮ ಸಲಹೆಯನ್ನು ಒಪ್ಪಿಕೊಂಡಿದ್ದೇನೆ. ಅವರು ಸಹೃದಯಿಗಳು, he is a gentleman, I can discuss with him. Let's try to find a solution

ಶ್ರೀ ಕೆ. ಶಿವಮೂರ್ತಿ:– ಸಾರ್, ಒಂದು submission ಇದೆ. ಈ ಪ್ರೈವೇಟ್‌ನವರು, ಖಾಸಗಿ ಬಸ್‌ಗಳವರು ಒಬ್ಬರಿಗೊಬ್ಬರು collude ಆಗಿಬಿಟ್ಟಿದ್ದಾರೆ. ಈಗ ನಮ್ಮ ಸೂಳೆಕೆರೆಯಲ್ಲಿ ಖಾಸಗಿ ಬಸ್ ಬಿತ್ತು. ಏಕೆಂದರೆ untimely ಖಾಸಗಿ ಬಸ್ ಹೇಗಿದೆಯೆಂದರೆ ಟೈರ್ ಎಂಬುದೇ ಸರಿಯಿಲ್ಲ. ಆಮೇಲೆ timing maintain ಮಾಡುವುದಿಲ್ಲ. They ride the KSRTC Bus on the route. They will not allow to lift the passangers. ಅದಕ್ಕಾಗಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ RTI Committee ಏನಿದೆ, ಅದು periodically meet ಆಗುತ್ತಿಲ್ಲ. To sort out the problem.. route ಇದ್ದೂ route operate ಮಾಡುತ್ತಿಲ್ಲ.

ಅಧ್ಯಕ್ಷರು:– ದಯವಿಟ್ಟು ಒಂದು ಪ್ರಶ್ನೆಯನ್ನು ಕೇಳುವುದನ್ನು ಕಲಿತುಕೊಳ್ಳಿ.

ಶ್ರೀ ಕೆ. ಶಿವಮೂರ್ತಿ:– ಸಾರ್, ಲೈಸೆನ್ಸ್ ಇದ್ದರೂ ಕೂಡ operate ಮಾಡುವುದಿಲ್ಲ. ಖಾಸಗಿಯವರ ಜೊತೆಗೆ KSRTC ಅವರು ಶಾಮೀಲಾಗಿದ್ದಾರೆ.

ಅಧ್ಯಕ್ಷರು:– ನೋಡಿ ನೀವು senior member ಆಗಿದ್ದೀರಿ. ಪ್ರಶ್ನೆ ಕೇಳುವುದನ್ನು ಕಲಿತುಕೊಳ್ಳಿ. ಮಾನ್ಯ ಸಚಿವರೆ, ಅದೇನು ಉತ್ತರ ಹೇಳಿ.

ಶ್ರೀ ರಾಮಲಿಂಗಾರೆಡ್ಡಿ:– ಮಾನ್ಯ ಅಧ್ಯಕ್ಷರೆ, ನನ್ನ ಆತಂಕವೇನೆಂದರೆ, ಗ್ರಾಮಾಂತರ ಪ್ರದೇಶಕ್ಕೆ ನಾವು permit ಕೊಡುತ್ತೇವೆ. ಅವರೇನು ಮಾಡುತ್ತಾರೆಂದರೆ, ಮೊದಲು ಗ್ರಾಮಾಂತರ ಎಂದು ಪರ್ಮಿಟ್ ತೆಗೆದುಕೊಳ್ಳುತ್ತಾರೆ. ಆದರೆ ಅವರು ಹಳ್ಳಿಗಳ ಮೇಲೆ ಹೋಗುವುದೇ ಇಲ್ಲ. ಅವರು ಹೋದರೆ ಸಂತೋಷ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಅವರು ಪರ್ಮಿಟ್ ಕೊಡುವುದಿಲ್ಲ. ಆದುದರಿಂದ ಅವರು ಏನು ಮಾಡುತ್ತಾರೆಂದರೆ RTO ಗೆ ಕೊಡುತ್ತಾರೆ, ಪೋಲಿಸ್‌ನವರಿಗೆ ದುಡ್ಡು ಕೊಡುತ್ತಾರೆ, ಪರ್ಮಿಟ್ ಒಂದು ಕಡೆಗೆ ತೆಗೆದುಕೊಂಡರೆ ಬಸ್ ಇನ್ನೊಂದು ಕಡೆಯಲ್ಲಿ ಓಡಿಸುತ್ತಾರೆ. ಶಿವಮೂರ್ತಿ ಹೇಳಿದ್ದು altogether different. Fitness certificate ಯಾವು ಯಾವುದಕ್ಕೋ ಕೊಟ್ಟುಬಿಡುತ್ತೀರಿ, ಯಾವುದಕ್ಕೆ ಕೊಡಬಾರದೋ ಅದಕ್ಕೆ F.C. ಕೊಡುತ್ತೀರಿ.

ಅಧ್ಯಕ್ಷರು:– ಈಗಾಗಲೇ ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಅವರುಗಳ ಜೊತೆಗೆ ಕುಳಿತುಕೊಂಡು ಚರ್ಚೆ ಮಾಡಿ ಸಮಸ್ಯೆ ಬಗೆಹರಿಸಿಕೊಳ್ಳಿ.

ಶ್ರೀ ಬಿ.ಕೆ. ಶಿವಮೂರ್ತಿ:– ಸಾರ್, ಲೈಸೆನ್ಸ್ ಇದ್ದರೂ ಕೂಡ ಅವರು operate ಮಾಡುವುದಿಲ್ಲ.

ಅಧ್ಯಕ್ಷರು:– ಅಂಥವುಗಳು ಯಾವು ಯಾವುದಿದೆ ಅದನ್ನು ಹೇಳಿ.

(ಗೊಂದಲ)

ಅಧ್ಯಕ್ಷರು:–ಈಗ ಆಯಿತು. ಮುಂದಿನ ಪ್ರಶ್ನೆ ಎಸ್.ಆರ್.ಮಹೇಶ್‌ರವರದ್ದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಮಾನ್ಯ ಅಧ್ಯಕ್ಷರೆ, ಅವರ ಪರವಾಗಿ ನಾನು ಕೇಳುತ್ತೇನೆ.

ಅಧ್ಯಕ್ಷರು:– ಆದರೆ ಆ ಸದಸ್ಯರು ಅನುಮತಿ ಕೋರಿ ಪತ್ರ ಬರೆದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ರಾಜ್ಯದ ಸಮಸ್ಯೆ ಇದ್ದರೆ ಆ ಬಗ್ಗೆ ಕೇಳಬಹುದು.

ಅಧ್ಯಕ್ಷರು:– ಇರಬಹುದು, ಆ ರೀತಿ ಬರುವುದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ತಾವು ಒಪ್ಪಿಗೆ ಕೊಟ್ಟರೆ ಅವರು ಕೇಳಬಹುದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಮಾನ್ಯ ಅಧ್ಯಕ್ಷರೆ, ನೀವು ಒಪ್ಪಿಗೆ ಕೊಟ್ಟರೆ ಕೇಳುತ್ತೇನೆ.

ಅಧ್ಯಕ್ಷರು:– ಅನುಮತಿ ಕೋರಿ ಪತ್ರ ಎಸ್.ಆರ್.ಮಹೇಶ್‌ರವರಿಂದ ಬಂದಿಲ್ಲ. ಅವರು authorize ಮಾಡಿಲ್ಲದಿರುವುದರಿಂದ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.